ಸಿ ಸಿ ನಂ. **1391/2022**

**ಪಿಡಬ್ಲ್ಯೂ - 1 ಹೇಮಂತ್ ಕುಮಾರ್ ಎಂ ಎನ್**

**ದಿನಾಂಕ 03-07-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಶ್ರೀ. ಎ ಜೆ ಎಸ್ ಆರೋಪಿ ಪರ ವಕೀಲರಿಂದಃ**

ನಾನು ಎಂ.ಎ, ಪಿ ಹೆಚ್ ಡಿ ಓದಿರುತ್ತೇನೆ. ನನಗೆ ಕನ್ನಡ ಹಾಗೂ ಇಂಗ್ಲಿಷ್ ಎರಡು ಭಾಷೆ ಓದಲು, ಬರೆಯಲು ಹಾಗೂ ಅರ್ಥ ಮಾಡಿಕೊಳ್ಳುತ್ತೇನೆ ಎಂದರೆ ಸರಿ. ನಾನು ವಿರಾಜಪೇಟೆಯ ಸೆಂಟ್ ಆನ್ಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಪಕನಾಗಿ ಕೆಲಸ ಮಾಡಿಕೊಂಡಿರುತ್ತೇನೆ. ನನಗೆ ಆರೋಪಿಯು ಸುಮಾರು ಆರೇಳು ವರ್ಷಗಳಿಂದ ಪರಿಚಿತರು. ಆರೋಪಿ ನನಗೆ ನನ್ನ ಸಂಬಂಧಿಕರ ಮೂಲಕ ಪರಿಚಯವಾಗಿರುತ್ತಾರೆ. ಸದರಿ ಸಂಬಂಧಿ ನನ್ನ ಹೆಂತಿಯ ಅಕ್ಕನಾದ ದೇಚಮ್ಮರವರಾಗಿರುತ್ತಾರೆ. ಸದರಿ ದೇಚಮ್ಮರವರು ವಿರಾಜಪೇಟೆಯ ಕಾವೇರಿ ಕಾಲೇಜಿನಲ್ಲಿ ಪ್ರಾಧ್ಯಪಕಿಯಾಗಿ ಕೆಲಸ ಮಾಡಿಕೊಂಡಿರುತ್ತಾರೆ. ಅವರಿಗೆ ಆರೋಪಿ ಹೇಗೆ ಪರಿಚಯವಾಗಿರುತ್ತಾರೆಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಆರೋಪಿಯು ಗುತ್ತಿಗೆದಾರನಾಗಿ ಕೆಲಸ ಮಾಡಿಕೊಂಡಿರುತ್ತಾರೆ. ಆರೋಪಿಯ ಮನೆ ಹಾಗೂ ಅವರ ತಂದೆ ತಾಯಿಯ ಬಗ್ಗೆ ಅಷ್ಟು ವಿವರ ನನಗೆ ಗೊತ್ತಿರುವುದಿಲ್ಲ. ಆರೋಪಿಯು ನನ್ನ ತಂದೆ ಹಾಗೂ ಮನೆಯವರ ವಿಚಾರ ಅಷ್ಟಾಗಿ ಗೊತ್ತಿರುವುದಿಲ್ಲ. ನನ್ನ ಹಾಗೂ ಆರೋಪಿಯ ನಡುವೆ ಈ ಪ್ರಕರಣದ ಹಣಕಾಸಿನ ವ್ಯವಹಾರಕ್ಕಿಂತ ಹಿಂದೆ ಬೇರೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ನಾನು ಆರೋಪಿಗೆ ರೂ. 2,60,000/- ಗಳನ್ನು ನಗದು ರೂಪದಲ್ಲಿ ಸಾಲ ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದು ನಿಮ್ಮ ಹೆಂಡತಿಯ ಪರೀಕ್ಷೆಯ ಮೂಲ ಹಾಲ್ ಟಿಕೆಟ್ ಎಂದು ಕೇಳಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅದನ್ನು ಆರೋಪಿಯ ಪರ ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಅದು ನಿಮ್ಮ ಹೆಂಡತಿಯ 2018 ನೇ ಸಾಲಿನಲ್ಲಿ ನಡೆದ ಪರೀಕ್ಷೆಯ ಹಾಲ್ ಟಿಕೆಟ್ ನ ಪ್ರತಿ ಅಲ್ಲವೆ ಎಂದು ಕೇಳಲಾಗಿ, ಸಾಕ್ಷಿಯು ಅದನ್ನು ನೋಡಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಅದು ಜೆರಾಕ್ಸ್ ಪ್ರತಿ

ಆದ್ದರಿಂದ ಅದನ್ನು ಗುರುತಿಸಲು ಬರುವುದಿಲ್ಲವೆಂದು ತಕರಾರು ಮಾಡಿರುತ್ತಾರೆ. ಸಾಕ್ಷಿಯು ಸದರಿ ದಾಖಲೆಯನ್ನು ಒಪ್ಪಿಕೊಂಡ ಮೇರೆಗೆ ಪಿರ್ಯಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಸದರಿ ದಾಖಲೆಯನ್ನು ಆರೋಪಿ ಪರ ನಿಡಿ2 ಎಂದು ಗುರುತಿಸಲಾಯಿತು.

ನಿಡಿ2 ಹಾಲ್ ಟಿಕೆಟ್ ಕೆ ಎಸ್ ಇ ಟಿ ಪರೀಕ್ಷೆಗೆ ಸಂಬಂಧಿಸಿದ ಹಾಲ್ ಟಿಕೆಟ್ ಆಗಿರುತ್ತದೆ. ನನ್ನ ಹೆಂಡತಿಯಾದ ಮಾಚಮ್ಮ ರವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನೀಡಲು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸ್ವಸ್ಥರಿದ್ದಾರೆ. ಸದರಿ ರೂ. 2,60,000/- ಗಳನ್ನು ನಾನು ಆರೋಪಿಗೆ ನನ್ನ ಹೆಂಡತಿಯಾದ ಮಾಚಮ್ಮ ರವರ ಕೆ ಎಸ್ ಇ ಟಿ ಪರೀಕ್ಷೆಯನ್ನು ಪಾಸ್ ಮಾಡುವ ಸಂಬಂಧ ನೀಡಿದ ಹಣ ಎಂದರೆ ಸರಿಯಲ್ಲ. ನಿಪಿ1 ಚೆಕ್ ನ್ನು ನಾನು ಮೈಸೂರಿನ ಆಲನಹಳ್ಳಿ ಪೋಲಿಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಚೆಕ್ ನ್ನು ಆರೋಪಿ ನನ್ನಿಂದ ರೂ. 2,60,000/- ಗಳ ಸಾಲದ ಹಣ ಪಡೆದುಕೊಂಡ ಸಮಯದಲ್ಲಿ ಮೈಸೂರಿನಲ್ಲಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ, ಅಂದರೆ ಆರೋಪಿ ನನಗೆ ದಿನಾಂಕ 01-01-2022 ರಂದೇ ನೀಡಿರುತ್ತಾರೆ.

ನಿಪಿ1 ರಲ್ಲಿರುವ ದಿನಾಂಕವನ್ನು ನಾನೇ ತುಂಬಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಈ ಪ್ರಕರಣದ ಹಣಕಾಸಿನ ವ್ಯವಹಾರದ ನಂತರ ಮತ್ತೆ ಯಾವುದೇ ಸಾಲ ನೀಡಿರುವುದಿಲ್ಲ. ನಿಪಿ1 ಚೆಕ್ ನ್ನು ನಾನು ಮೈಸೂರಿನ ಆಲನಹಳ್ಳಿ ಪೋಲಿಸ್ ಠಾಣೆಯಲ್ಲಿ ಆಗಿನ ಡಿಸಿಪಿಯಾದ ಪ್ರದೀಪ್ ಗುಂಟಿ ರವರ ಸಮಕ್ಷಮ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಹಣಕಾಸಿನ ವಿಚಾರದ ಸಂಬಂಧ ನಾನು ಒಮ್ಮೆ ಮೈಸೂರಿನ ಆಲನಹಳ್ಳಿ ಪೋಲಿಸ್ ಠಾಣೆಗೆ ಹೋಗಿ ಆರೋಪಿ ಸಾಲದ ಹಣ ಹಿಂತಿರುಗಿಸದೆ ಇರುವ ಬಗ್ಗೆ ತಿಳಿಸಿರುತ್ತೇನೆ. ಸದರಿ ಆಲನಹಳ್ಳಿ ಪೋಲಿಸ್ ಠಾಣೆಯಲ್ಲಿ ನನಗೆ ಸ್ನೇಹಿತರಿರುವ ಯಾವುದೇ ಪೋಲಿಸರು ಇರುವುದಿಲ್ಲ. ಸದರಿ ಪೋಲಿಸ್ ಠಾಣೆಗೆ ನನ್ನ ಜೊತೆ ನನ್ನ ಹೆಂಡತಿಯ ಅಕ್ಕನ ಗಂಡ ಶಶಿಕುಮಾರ್ ಸಹ ಬಂದಿರುತ್ತಾರೆ. ಸದರಿ ಶಶಿಕುಮಾರ್ ರವರಿಗೆ ಆಲನಹಳ್ಳಿ ಪೋಲಿಸ್ ಠಾಣೆಯಲ್ಲಿ ಪರಿಚಯ ಇರುವವರು ಯಾರಾದರೂ ಇದ್ದಾರೋ ಇಲ್ಲವೋ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಆ ರೀತಿ ನಾವು ಸದರಿ ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ಆರೋಪಿಗೆ ಕರೆ ಮಾಡಿ, ಬರಲು ತಿಳಿಸಿರುತ್ತಾರೆ ಎಂದರೆ ಸರಿ.

ಆಗ ಆರೋಪಿಯು ಸದರಿ ಆಲನಹಳ್ಳಿ ಪೋಲಿಸ್ ಠಾಣೆಗೆ ಬಂದಿರುತ್ತಾರೆ ಎಂದರೆ ಸರಿ. ಸದರಿ ದಿನದಂದು ಅಲ್ಲಿ ಸದರಿ ಠಾಣೆಯ ಪಿಎಸ್ಐ ಹಾಗೂ ಇತರ ಪೋಲಿಸರು ಇದ್ದಿದ್ದು, ಅವರ ಹೆಸರುಗಳು ನನಗೆ ಗೊತ್ತಿರುವುದಿಲ್ಲ. ಸದರಿ ಪಿಎಸ್ಐ ರವರು ನನ್ನ ಹೆಂಡತಿಯ ಅಕ್ಕನ ಗಂಡನಾದ ಶಶಿಕುಮಾರ್ ರವರ ಸ್ನೆಹೀತರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ದಿನದಂದು ಆರೋಪಿಯು ಪೋಲಿಸ್ ಠಾಣೆಗೆ ಬಂದಾಗ ಪೋಲಿಸರ ಸಮಕ್ಷಮದಲ್ಲಿ ನಿಪಿ1 ಚೆಕ್ ನ್ನು ಆರೋಪಿಯಿಂದ ಪಡೆದು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1 ಚೆಕ್ ನ್ನು ಸದರಿ ಆಲನಹಳ್ಳಿ ಪೋಲಿಸ್ ಠಾಣೆಯಲ್ಲಿ ಆರೋಪಿಯನ್ನು ಹೆದರಿಸಿ ಅವರಿಂದ ಪಡೆದುಕೊಂಡ ಚೆಕ್ ಎಂದರೆ ಸರಿಯಲ್ಲ. ನೀವು ಈ ಪ್ರಕರಣದಲ್ಲಿ ನಡೆದಿದೆ ಎಂದು ಹೇಳಲಾದ ಹಣಕಾಸಿನ ವ್ಯವಹಾರವನ್ನು ಹೊರತುಪಡಿಸಿ, ಆಲನಹಳ್ಳಿ ಪೋಲಿಸ್ ಠಾಣೆಗೆ ಆರೋಪಿ ಜೊತೆ ಬೇರೆ ಯಾವುದೇ ರೀತಿಯ ವ್ಯವಹಾರದ ಸಂಬಂಧ ಹೋಗಿದ್ದೀರಾ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಸದರಿ ದಿನದಂದು ಆರೋಪಿಯ ವಿರುದ್ಧ ಮಾತ್ರ ದೂರನ್ನು ನೀಡುವ ಸಂಬಂಧ ಸದರಿ ಪೋಲಿಸ್ ಠಾಣೆಗೆ ಹೋಗಿರುತ್ತೇವೆ ಎಂದರೆ ಸರಿ. ನಾನು ಸದರಿ ದಿನದಂದು ಆರೋಪಿಯ ವಿರುದ್ಧ ಲಿಖಿತ ದೂರನ್ನು ನೀಡಿದ್ದೇನೋ ಇಲ್ಲವೋ ಎಂದು ನನಗೆ ಈಗ ನೆನಪಿರುವುದಿಲ್ಲ. ನಾನು ಸದರಿ ಆಲನಹಳ್ಳಿ ಪೋಲಿಸ್ ಠಾಣೆಗೆ ಯಾವ ದಿನದಂದು ಹೋಗಿತ್ತೇನೆಂದು ನನಗೆ ಈಗ ನೆನಪಿರುವುದಿಲ್ಲ.

ನಾನು ದಿನಾಂಕ 01-01-2022 ರಂದು ಆರೋಪಿಗೆ ಮೈಸೂರಿನ ಒಂದು ಹೋಟೆಲ್ ನಲ್ಲಿ ಸಾಲವನ್ನು ನೀಡಿರುತ್ತೇನೆ. ಸದರಿ ಹೋಟೆಲ್ ಹೆಸರು ನನಗೆ ಗೊತ್ತಿರುವುದಿಲ್ಲ. ಅದು ಮೈಸೂರಿನ ಐಶ್ವರ್ಯ ಪೆಟ್ರೋಲ್ ಬಂಕ್ ಹತ್ತಿರವಿರುವ ಹೋಟೆಲ್ ಆಗಿರುತ್ತದೆ. ಸದರಿ ಐಶ್ವಯ ಪೆಟ್ರೋಲ್ ಬಂಕ್ ಮೈಸೂರಿನ ವಿಜಯನಗರದಲ್ಲಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಐಶ್ವರ್ಯ ಪೆಟ್ರೋಲ್ ಬಂಕ್ ಹತ್ತಿರವಿರುವ ಹೋಟೆಲ್ ಮಡಿಕೇರಿ ಮೈಸೂರು ರಸ್ತೆಯ ಮೈಸೂರು ತಲುಪುವ ಆರಂಭದಲ್ಲಿರುತ್ತದೆ ಎಂದರೆ ಸರಿ. ನಾನು ಹೋಗಿದ್ದ ಆಲನಹಳ್ಳಿ ಪೋಲಿಸ್ ಠಾಣೆ ಮೈಸೂರಿನ ಇನ್ನೊಂದು ಭಾಗದಲ್ಲಿದ್ದು, ಸದರಿ ಐಶ್ವರ್ಯ ಪೆಟ್ರೋಲ್ ಬಂಕ್ ಹತ್ತಿರವಿರುವ ಹೋಟೆಲ್ ಗೂ ಹಾಗೂ

ಸದರಿ ಪೋಲಿಸ್ ಠಾಣೆಗೂ ತುಂಬಾ ಅಂತರವಿರುತ್ತದೆ ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ. ನೀವು ಆಲನಹಳ್ಳಿ ಪೋಲಿಸ್ ಠಾಣೆಗೆ ಹೋದ ಬಗ್ಗೆ ಅಲ್ಲಿ ಆರೋಪಿಗೆ ಪೋಲಿಸರ ಮೂಲಕ ಕರೆ ಮಾಡಿ ಆತನನ್ನು ಪೋಲಿಸ್ ಠಾಣೆಗೆ ಕರೆಸಿಕೊಂಡ ಬಗ್ಗೆ ನಿಮ್ಮ ದೂರು ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಲು ತೊಂದರೆಯಿತ್ತೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ತಿಳಿಸಿರುವಂತೆ ನಾನು ಆರೋಪಿಗೆ ರೂ. 2,60,000/- ಸಾಲವನ್ನು ನೀಡಿರುವುದಿಲ್ಲ, ಬದಲಾಗಿ ಆರೋಪಿಗೆ ಕೇವಲ ರೂ. 60,000/- ವನ್ನು ನೀಡಿ ಅದನ್ನು ಮೈಸೂರಿನ ವಿಶ್ವ ವಿದ್ಯಾನಿಲಯದಲ್ಲಿರುವ ಯಾರಿಗೋ ತಲುಪಿಸುವಂತೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ರೀತಿ ರೂ. 60,000/- ಗಳನ್ನು ಮೈಸೂರಿನ ವಿಶ್ವ ವಿದ್ಯಾನಿಲಯದಲ್ಲಿರುವ ಯಾರಿಗೋ ತಲುಪಿಸುವಂತೆ ನೀಡಿ, ನನ್ನ ಹೆಂಡತಿಯಾದ ಮಾಚಮ್ಮ ರವರ ಹಾಲ್ ಟಿಕೆಟ್ ಹಾಗೂ ಕೆ ಎಸ್ ಇ ಟಿ ಪರೀಕ್ಷೆಯ ಓ ಎಂ ಆರ್ ಶೀಟ್ ನ್ನು ನೀಡಿರುತತೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ರೂ. 60,000/- ಗಳನ್ನು ಮೈಸೂರಿನ ವಿಶ್ವ ವಿದ್ಯಾನಿಲಯದಲ್ಲಿನ ಕೆಲಸದವರು ಪಡೆದುಕೊಂಡಿದ್ದು, ಅದನ್ನು ಹಿಂದಕ್ಕೆ ಪಡೆದುಕೊಳ್ಳುವ ಸಲುವಾಗಿ ನಾನು ಆರೋಪಿಯ ವಿರುದ್ಧ ಪೋಲಿಸ್ ಠಾಣೆಗೆ ದೂರನ್ನು ನೀಡಿ ಅವರಿಂದ ಒತ್ತಾಯಪೂರ್ವಕವಾಗಿ ನಿಪಿ1 ಚೆಕ್ ನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಹೆಂಡತಿ ಮಾಚಮ್ಮ ಎಂ ಕಾಂ ಮಾಸ್ಟರ್ ಡಿಗ್ರಿ ಮಾಡಿರುತ್ತಾರೆ. ಆಕೆ ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ಆಕೆ ಕೆ ಎಸ್ ಇ ಟಿ, ಎನ್ ಇ ಟಿ ಹಾಗೂ ಪಿ ಹೆಚ್ ಡಿ ಪ್ರವೇಶಾತಿ ಪರೀಕ್ಷೆ ತೆಗೆದುಕೊಳ್ಳುವ ಪ್ರವೃತ್ತಿ ಹೊಂದಿದ್ದಾರೆಂದರೆ ಸಾಕ್ಷಿಯು ಆ ರೀತಿ ಕೆಲವು ಪರೀಕ್ಷೆಯನ್ನು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಾಯವಕಾಶ ನೀಡಿ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ.

ಸಹಿ/-
(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ